ಅಧ್ಯಕ್ಷರು :- ಈ ಸದನವನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕುತ್ತೇನೆ.

(ಸದನವು 12-52ಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

ಸದನವು ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ ಪುನರಾರಂಭಗೊಂಡಿತು

(ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

(ಶ್ರೀಯುತರಾದ ವಿ. ಕೃಷ್ಣಪ್ಪ, ಗುಂಡಪ್ಪ ವಕೀಲ್, ಕೆ.ಹೆಚ್. ಹನುಮೇಗೌಡ ಹಾಗೂ ಇತರರು ಧರಣಿಯಲ್ಲಿದ್ದರು)

ಶ್ರೀ ಡಿ.ವಿ. ಸದಾನಂದಗೌಡ :- ತುಂಬಾ ನೋವಿನಿಂದ ಈ ವಿಚಾರಗಳನ್ನು ಸದನದಲ್ಲಿ ಇವೊತ್ತು ಪ್ರಸ್ತಾಪ ಮಾಡಬೇಕು. ವಿಶೇಷವಾಗಿ ಇವತ್ತು ಹಿರಿಯ ಸಚಿವರಾದ ಸನ್ಮಾನ್ಯ ರಂಗನಾಥ್‌ರವರು ಸ್ಪೀಕರ್ ಆಗಿ, ಮಂತ್ರಿಗಳಾಗಿ ಸತತವಾಗಿ ಹಲವಾರು ವರ್ಷಗಳಿಂದ ಈ ಸದನದಲ್ಲಿದ್ದು, ರಾಜಕೀಯ ಸಾರ್ವಜನಿಕ ಜೀವನದಲ್ಲಿದ್ದ ವ್ಯಕ್ತಿ, ಇವತ್ತು ಪತ್ರಿಕೆಗಳಲ್ಲಿ ಬರುವಂತಹ ಒಂದು ನೈಜ ವಿಚಾರವನ್ನು

(ಗೊಂದಲ)

ಅಧ್ಯಕ್ಷರು :- ಸದಸ್ಯರ ಹಕ್ಕನ್ನು ಕೇಳಿದ್ದಾರೆ ಅಷ್ಟೆ. ತಾವು ಕುಳಿತುಕೊಳ್ಳಿ. ಸದಸ್ಯರ ಹಕ್ಕು ಈ ಮನೆಯ ವಿಷಯದಲ್ಲಿ ಏನು ಇದೆ, ಅದರ ಬಗ್ಗೆ ಕೇಳಿದ್ದಾರೆ ಅಷ್ಟೆ. ಅವರು ಕೇಳಿರುವುದರಲ್ಲಿ ಏನು ಮಿಸ್ಟೇಕ್ ಇಲ್ಲ. ಅವರು ಕೇಳಿರುವುದು ಕರೆಕ್ಟ್ ಆಗಿದೆ. ಸದಸ್ಯರಿಗೆ ಅಗೌರವವಾಗುವ ರೀತಿಯಲ್ಲಿ ಬರೆದಿದ್ದಾರೆ, ಅವರು ಕೇಳುವುದಲ್ಲಿ ತಪ್ಪೇನೂ ಇಲ್ಲ I don't accept that word. I don't accept.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೇ, ದಯವಿಟ್ಟು ಕೇಳಿ. ಏಕೆಂದರೆ ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ತುಂಬಾ ನೋವಿನಿಂದ.....

(ಗೊಂದಲ)

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಆ ರೀತಿ ಹೇಳಿದರು ಎಂದು ದಯವಿಟ್ಟು ಹೇಳಬೇಡಿ. ನೀವೂ ಬುದ್ಧಿವಂತರಿದ್ದೀರಿ. ಮೂರನೇ ಬಾರಿ ಎಲೆಕ್ಟ್ ಆಗಿದ್ದೀರಿ.

(ಗೊಂದಲ)

ಸದಸ್ಯರ ಗೌರವದ ಹಕ್ಕುಬಾಧ್ಯತೆಯನ್ನು ಎತ್ತಿ ಹಿಡಿಯಿರಿ ಎಂದು ಅವರು ನನ್ನನ್ನು ಕೇಳಿದ್ದಾರೆ ಅಷ್ಟೆ. ನಾನು ಉತ್ತರ ಹೇಳಬೇಕು ಅಷ್ಟೆ. ನೀವಲ್ಲ ಉತ್ತರ ಹೇಳುವವರು ದಯವಿಟ್ಟು ಕೇಳಿ. ನಾನು ಉತ್ತರ ಹೇಳಬೇಕು. ಮಾನ್ಯ ಮಂತ್ರಿಗಳಿಗೆ ನಾನು ಉತ್ತರವನ್ನು ಹೇಳಬೇಕು. ಅದಕ್ಕೆ ಮೊದಲೇ ನೀವೆಲ್ಲಾ ನಿಂತು ಮಾತನಾಡಿದರೆ ಹೇಗೆ?